uploaded

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯದಲ್ಲಿ ಸ್ವ ಸಹಾಯ ಗುಂಪುಗಳನ್ನು ಬಲಪಡಿಸಲು ಒಂದೇ ಸೂರಿನಡಿ ತಂದು ಇದಕ್ಕೆ ಒಂದು ಸ್ವ ಸಹಾಯ ಗುಂಪುಗಳ ವಿವರಗಳನ್ನು ಪ್ರತ್ಯೇಕ ಮಾಹಿತಿ ನಿರ್ವಹಣಾ ವ್ಯವಸ್ಥೆಯಲ್ಲಿ ಅಳವಡಿಸುವ ಕುರಿತು.

ಓದಲಾಗಿದೆ:
1. ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣ 2021-22 ರ ಕಂಡಿಕೆ 39
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ:19.03.2021 ಮತ್ತು 22.07.2021 ರಂದು ನಡೆದ ಸಭೆಯ ನಡವಳಿಗಳು
3. ಸರ್ಕಾರದ ಕಾರ್ಯದರ್ಶಿಗಳು, ಕೌಉಜೀ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ:16.09.2021 ರಂದು ನಡೆದ ಸಭೆಯ ನಡವಳಿಗಳು

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣ 2021-22 ರ ಕಂಡಿಕೆ 39 ರನ್ವಯ "ರಾಜ್ಯದ ಸ್ವ ಸಹಾಯ ಗುಂಪುಗಳು ಮತ್ತು ಅವುಗಳ ಒಕ್ಕೂಟವನ್ನು ಬಲಪಡಿಸಲು ಸ್ವ ಸಹಾಯ ಗುಂಪುಗಳ ನೀತಿಯನ್ನು ರೂಪಿಸಲಾಗುವುದು. ಈ ನೀತಿಯ ಮೂಲಕ ಪ್ರಯೋಜನಗಳ ಪುನರಾವರ್ತನೆಯನ್ನು ತಪ್ಪಿಸಲು ರಾಜ್ಯದ ಎಲ್ಲ ಸ್ವ ಸಹಾಯ ಗುಂಪುಗಳನ್ನು ಜೀವನೋಪಾಯ ಅಭಿಯಾನದಡಿ ತರಲಾಗುವುದು" ಎಂದು ಘೋಷಿಸಲಾಗಿದೆ.

ಗ್ರಾಮೀಣ ಮತ್ತು ನಗರ ಪ್ರದೇಶದ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಸ್ವ ಸಹಾಯ ಗುಂಪುಗಳು ಶಕ್ತಿಯುತವಾದ ತಂತ್ರವೆಂದು ಹೇಳಬಹುದು. ರಾಜ್ಯದಲ್ಲಿ ಸುಮಾರು ಇಲಾಖೆಗಳಿಂದ ಸ್ವ ಶಕ್ತಿ ಗುಂಪುಗಳನ್ನು ರಚಿಸಲಾಗಿದೆ ಬೆಂಬಲ ವ್ಯವಸ್ಥೆ ಇಲ್ಲದೆ ಅತೀ ವೇಗವಾಗಿ ಸ್ವ ಸಹಾಯ ಗುಂಪುಗಳನ್ನು ಹುಟ್ಟುಹಾಕಿದ್ದರಿಂದ ಸ್ವ ಸಹಾಯ ಗುಂಪುಗಳು ಅಸ್ಥಿರವಾಗುತ್ತಿರುವುದನ್ನು ಹಲವಾರು ಅಧ್ಯಯನ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಗುಂಪು ರಚನೆಯ ಗುರಿಯನ್ನು ಸಾಧಿಸಲು ಪೈಪೋಟಿಯಿಂದ ಸ್ವ ಸಹಾಯ ಗುಂಪುಗಳನ್ನು ರಚನೆ ಮಾಡುತ್ತಿರುವುದರಿಂದ ಮಹಿಳೆಯರು ಏಕ ಕಾಲದಲ್ಲಿ ಬೇರೆ ಬೇರೆ ಗುಂಪುಗಳಲ್ಲಿ ಸದಸ್ಯತ್ವ ಪಡೆಯುವಂತಹ ಅನಿವಾರ್ಯಕ್ಕೆ ಒಳಗಾಗುತ್ತಿದ್ದಾರೆ. ಇದು ಮಹಿಳೆಯರಲ್ಲಿ ಗೊಂದಲ ಮತ್ತು ಸಂಘರ್ಷಕ್ಕೆ ಎಡೆ ಮಾಡಿಕೊಟ್ಟಿದೆ ಇದನ್ನು ತಪ್ಪಿಸಲು ಎಲ್ಲಾ ಇಲಾಖೆಗಳು ರಚನೆ ಮಾಡಿದ ಸ್ವ ಸಹಾಯ ಗುಂಪುಗಳನ್ನು ಒಂದೆಡೆ ತಂದು ಸಂಜೀವಿನಿ ಕೆಎಸ್‌ಆರ್‌ಎಲ್‌ಪಿಎಸ್ ಅಡಿಯಲ್ಲಿ ತಂದು ಹೆಚ್ಚಿನ ಮಟ್ಟದ ಆರ್ಥಿಕ ಸಹಾಯ ನೀಡುವುದರ ಮೂಲಕ ಎಲ್ಲಾ ಗುಂಪುಗಳನ್ನು ಸಬಲೀಕರಿಸುವುದು ಅಗತ್ಯವಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಎಲ್ಲಾ ಸ್ವ ಸಹಾಯ ಗುಂಪುಗಳನ್ನು ಒಂದೇ ಸೂರಿನಡಿ ತಂದು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಕೇಂದ್ರ ಪುರಸ್ಕೃತ ಯೋಜನೆಯಾದ NRLM ಗೆ ಸಿದ್ಧಪಡಿಸಿದ ಮಾಹಿತಿ ನಿರ್ವಹಣಾ ವ್ಯವಸ್ಥೆಯಲ್ಲಿ (MIS) ಅಂದರೆ nrlm.gov.in ಪೋರ್ಟಲ್‌ನಲ್ಲಿ SHGಗಳ ಸಂಪೂರ್ಣ ಆರ್ಥಿಕ ಮತ್ತು ಭೌತಿಕ ಮಾಹಿತಿಯನ್ನು ಭರ್ತಿ ಮಾಡಬೇಕೆಂದು ಸೂಚಿಸಲಾಗಿದೆ. ಇದಲ್ಲದೇ ಎಲ್ಲಾ SHG ಗಳ ಉತ್ಪಾದಿಸುವ ಉದ್ಯಮಗಳನ್ನು KSRSAC ಸಹಯೋಗದೊಂದಿಗೆ geo tagging ಮಾಡಲು ಸಹ ಸೂಚಿಸಲಾಗಿದೆ. ಇತರ ಇಲಾಖೆಗಳಿಂದ ರಚನೆಯಾದ ಸ್ವ ಸಹಾಯ ಗುಂಪುಗಳು WLF / GPLF / TLF ಗಳಲ್ಲಿ ಸೇರುವುದರ ಮೂಲಕ NRLM ಯೋಜನೆಗಳಿಂದ ನಿಯಮಾನುಸಾರ ಸೌಲಭ್ಯಗಳನ್ನು ಪಡೆಯಬಹುದೆಂದು ತಿಳಿಸಲಾಗಿದೆ

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ರಾಜ್ಯದ ಸ್ವ ಸಹಾಯ ಗುಂಪುಗಳು ಮತ್ತು ಅವುಗಳ ಒಕ್ಕೂಟವನ್ನು ಬಲಪಡಿಸಲು ಸ್ವ ಸಹಾಯ ಗುಂಪುಗಳನ್ನು ಹೊಂದಿರುವ ಸಂಬಂಧಪಟ್ಟ ಇಲಾಖೆಗಳ ಅಭಿಪ್ರಾಯದೊಂದಿಗೆ ಕರಡು ಸ್ವ ಸಹಾಯ ಗುಂಪುಗಳ ನೀತಿಯನ್ನು ರಚಿಸಲಾಗಿದೆ. ವಿವಿಧ ಇಲಾಖೆಗಳ


Generated from eOffice by SURESH, SDEL-SO(S), SECTION OFFICER, SKILL-SDEL on 11/05/2022 04:58 PM

ಅಡಿಯಲ್ಲಿ ರಚಿಸಲಾಗಿರುವ ಸ್ವ ಸಹಾಯ ಗುಂಪುಗಳ ವಿವರಗಳನ್ನು ಸಂಜೀವಿನಿ - ಕೆಎಸ್‌ಆರ್‌ಎಲ್‌ಪಿಎಸ್‌ಗೆ ನೀಡಲು ತಿಳಿಸಲಾಗಿದೆ.

ಸದರಿ ವಿಷಯವನ್ನು ಪರಿಶೀಲಿಸಲಾಗಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

## ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 227 ಉಜೀಇ 2020, ದಿನಾಂಕ: 25.03.2022

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ವಿವಿಧ ಇಲಾಖೆಗಳ ಸ್ವ ಸಹಾಯ ಗುಂಪುಗಳ ಮಾಹಿತಿಯನ್ನು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಕೇಂದ್ರ ಪುರಸ್ಕೃತ ಯೋಜನೆಯಾದ NRLM ಗೆ ಸಿದ್ಧಪಡಿಸಿದ ಮಾಹಿತಿ ನಿರ್ವಹಣಾ ವ್ಯವಸ್ಥೆಯಾದ (MIS) nrlm.gov.in ಪೋರ್ಟಲ್‌ನಲ್ಲಿ ದಾಖಲಿಸುವುದು. ತಾಲ್ಲೂಕು ಮಟ್ಟದಲ್ಲಿನ ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕದ ತಾಲ್ಲೂಕು ಯೋಜನಾ ವ್ಯವಸ್ಥಾಪಕರು ಹಾಗೂ ಜಿಲ್ಲಾ ಮಟ್ಟದಲ್ಲಿನ ಜಿಲ್ಲಾ ಅಭಿಯಾನ ನಿರ್ವಹಣಾ ಘಟಕದ ಜಿಲ್ಲಾ ಯೋಜನಾ ವ್ಯವಸ್ಥಾಪಕರ ಸಹಯೋಗದೊಂದಿಗೆ ನಿಯತಕಾಲಿಕವಾಗಿ ಮಾಹಿತಿಯನ್ನು ಒದಗಿಸಿ ಮಾಹಿತಿ ಇಂದೀಕರಿಸುವುದನ್ನು ಸಂಬಂಧಪಟ್ಟ ಇಲಾಖೆಗಳು ಖಚಿತಪಡಿಸಿಕೊಳ್ಳುವುದು.

ಈ ಆದೇಶದ **ಅನುಬಂಧದಲ್ಲಿ** ಲಗತ್ತಿಸಿರುವ ಇಲಾಖೆಗಳು / ಮಂಡಳಿ / ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಗಳು / NGO ಗಳು / ಬ್ಯಾಂಕ್‌ಗಳು ಇತ್ಯಾದಿಗಳು ಸ್ವ ಸಹಾಯ ಗುಂಪುಗಳಿಗೆ ಯಾವ ಮಟ್ಟದಲ್ಲಿ ಸರ್ಕಾರಿ ಸವಲತ್ತು, ಬ್ಯಾಂಕ್ ಲಿಂಕೇಜ್ ಹಾಗೂ ಗುಂಪುಗಳು ತಯಾರಿಸಿರುವ ಉತ್ಪನ್ನಗಳಿಗೆ ಮಾರಾಟ ಸಂಪರ್ಕ ಕಲ್ಪಿಸಲು ಸಂಜೀವಿನಿ ಕೆಎಸ್‌ಆರ್‌ಎಲ್‌ಪಿಎಸ್ ಯೋಜನೆಯಡಿ ತಲುಪುವಂತೆ ಪ್ರೇರೇಪಿಸುವುದು.

ಮುಂದುವರೆದು, ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಜೀವನೋಪಾಯ ಅಭಿಯಾನ (ನಗರ & ಗ್ರಾಮೀಣ) ರವರು ಸಂಜೀವಿನಿ ಕುರಿತು ಜಿಲ್ಲಾ ಮತ್ತು ಕ್ಷೇತ್ರ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವ ಸಹಾಯ ಸಂಘಗಳನ್ನು ಹೊಂದಿರುವ ಇಲಾಖೆಗಳು ಮತ್ತು ಎನ್‌ಜಿಓಗಳ ಅಧಿಕಾರಿ/ಸಿಬ್ಬಂದಿಗಳಿಗೆ ಅಭಿಮುಖೀಕರಣವನ್ನು ಆಯೋಜಿಸುವುದು. ಎಲ್ಲಾ ಸ್ವ ಸಹಾಯ ಗುಂಪುಗಳ ಮಾಹಿತಿಯನ್ನು ಇಲಾಖೆ ಮತ್ತು ಇತರ ಮಧ್ಯಸ್ಥಗಾರರ ಸಹಾಯದಿಂದ ಎನ್‌ಆರ್‌ಎಲ್‌ಎಂ portal ನಲ್ಲಿ ತರುವುದು. ಇತರ ಇಲಾಖೆಗಳಿಂದ ರಚನೆಯಾದ ಸ್ವ ಸಹಾಯ ಗುಂಪುಗಳು WLF / GPLF / TLF ಗಳಲ್ಲಿ ಸೇರುವುದರ ಮೂಲಕ NRLM ಯೋಜನೆಗಳಿಂದ ನಿಯಮಾನುಸಾರ ಸೌಲಭ್ಯಗಳನ್ನು ಪಡೆಯುವುದು. ಇದಲ್ಲದೇ ಎಲ್ಲಾ SHG ಗಳ ಉತ್ಪಾದಿಸುವ ಉದ್ಯಮಗಳನ್ನು KSRSAC ಸಹಯೋಗದೊಂದಿಗೆ geo tagging ಮಾಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

25/3/22

(ರಂಗಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

**ಇವರಿಗೆ:-**

20 copies
Issue
30/3/22
15:50

1. ಮಹಾಲೇಖಪಾಲರು, (ಎ&ಇ), (ಜಿ&ಎಸ್ ಎಸ್.ಎ), (ಇ&ಆರ್ ಎಸ್.ಎ), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಕೌಶಲ್ಯ ಭವನ, ಬೆಂಗಳೂರು.
4. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಜೀವನೋಪಾಯ ಅಭಿಯಾನ (ನಗರ ಮತ್ತು ಗ್ರಾಮೀಣ), ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಜಿಟಿಟಿಸಿ, ಬೆಂಗಳೂರು



Generated from eOffice by SURESH, SDEL-SO(S), SECTION OFFICER, SKILL-SDEL on 11/05/2022 04:58 PM

6. ಜಂಟಿ ಕಾರ್ಯದರ್ಶಿ, ಕೆ.ಜಿ.ಟಿ.ಟಿ.ಐ
7. ನಿರ್ದೇಶಕರು, ಸಿಡಾಕ್, ಧಾರವಾಡ.
8. ಸ್ವ ಸಹಾಯ ಗುಂಪುಗಳನ್ನು ಹೊಂದಿರುವ ಎಲ್ಲಾ ಸಂಬಂಧಪಟ್ಟ ಇಲಾಖೆ / NGO / ನಿಗಮ / ಮಂಡಳಿ / ಬ್ಯಾಂಕ್‌ಗಳು.
9. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10. ಉಪ ನಿರ್ದೇಶಕರು, ಖಜಾನೆ ಎನ್ ಎಂ ಸಿ ಖನಿಜ ಭವನ, ರೇಸ್ ಕೋರ್ಸ್ ರೋಡ್, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ 3 & 9, ವಿಧಾನ ಸೌಧ, ಬೆಂಗಳೂರು.

ಮಾಹಿತಿಗಾಗಿ:-

1. ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ & ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ & ಜೀವನೋಪಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ & ಜೀವನೋಪಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ & ಜೀವನೋಪಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಶಾಖಾಧಿಕಾರಿ, ಶಾಖೆ 7, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ & ಜೀವನೋಪಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.



Generated from eOffice by SURESH, SDEL-SO(S), SECTION OFFICER, SKILL-SDEL on 11/05/2022 04:58 PM

## ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 227 ಉಜೀಇ 2020, ದಿನಾಂಕ: 25.03.2022 ರ ಅನುಬಂಧ.

ಸ್ವ ಸಹಾಯ ಗುಂಪುಗಳನ್ನು ಹೊಂದಿರುವ ಇಲಾಖೆ / NGO / ಬ್ಯಾಂಕ್‌ಗಳ ವಿವರ

1. ಸಂಜೀವಿನಿ - ಕೆ.ಎಸ್.ಆರ್.ಎಲ್.ಪಿ.ಎಸ್. (ಗ್ರಾಮೀಣ ಮತ್ತು ನಗರ)
2. ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
3. ಸಮಾಜ ಕಲ್ಯಾಣ ಇಲಾಖೆ
4. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
5. ಹಿಂದುಳಿದ ವರ್ಗದವರ ಕಲ್ಯಾಣ ಇಲಾಖೆ
6. ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿ (KMF)
7. ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ (SLBC)
8. NABARD
9. FEVORD-K
10. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆ (SKDRDP)
11. ತೋಟಗಾರಿಕೆ ಇಲಾಖೆ
12. ಕೃಷಿ ಇಲಾಖೆ
13. ಸಹಕಾರ ಸಂಘಗಳ ನೋಂದಣಿ ಇಲಾಖೆ
14. ಜಲಾನಯನ ಅಭಿವೃದ್ಧಿ ಇಲಾಖೆ
15. ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
16. ಅರಣ್ಯ ಇಲಾಖೆ
17. ಸ್ವ ಸಹಾಯ ಗುಂಪುಗಳು ಹೊಂದಿದ ಇನ್ನಿತರ ಇಲಾಖೆಗಳು



Generated from eOffice by SURESH, SDEL-SO(S), SECTION OFFICER, SKILL-SDEL on 11/05/2022 04:58 PM